# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1410** |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16.03.2026 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಪ್ರತಿ ತಿಂಗಳು ವಿತರಿಸಲಾಗುವ ಅಕ್ಕಿಯ ಪ್ರಮಾಣ ಎಷ್ಟು; ಅದಕ್ಕೆ ಖರ್ಚು ಮಾಡಲಾಗುತ್ತಿರುವ ಮೊತ್ತ ಎಷ್ಟು; | ಪ್ರತಿ ಅಂತ್ಯೋದಯ ಅನ್ನ ಯೋಜನೆ (AAY) ಕಾರ್ಡಿಗೆ 35 ಕೆ.ಜಿ ಆಹಾರ ಧಾನ್ಯಗಳನ್ನು ಪ್ರತಿ ಮಾಹೆ ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 14 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ 21ಕೆ.ಜಿ ರಾಗಿ/ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ.<br><br>ಕೇಂದ್ರ ವ್ಯಾಪ್ತಿಯ ಆದ್ಯತಾ ಪಡಿತರ ಚೀಟಿಯ (ಬಿಪಿಎಲ್) ಪ್ರತಿ ಸದಸ್ಯರಿಗೆ ಪ್ರತಿ ಮಾಹೆ 5 ಕೆ.ಜಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 2 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ ರಾಗಿ ಮತ್ತು ಜೋಳದ ಲಭ್ಯ ಪ್ರಮಾಣದಂತೆ 03 ಕೆ.ಜಿ ರಾಗಿ/ ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ.<br><br>ರಾಜ್ಯ ವ್ಯಾಪ್ತಿಯ ಆದ್ಯತಾ ಪಡಿತರ ಚೀಟಿಯ (ಬಿಪಿಎಲ್) ಪ್ರತಿ ಸದಸ್ಯರಿಗೆ ರಾಜ್ಯ NFSA ಅಡಿ ಪ್ರತಿ ಮಾಹೆ 5 ಕೆ.ಜಿ ಅಕ್ಕಿಯನ್ನು ಹಂಚಿಕೆ ಮಾಡಲಾಗುತ್ತಿದೆ.<br><br>ರಾಜ್ಯ ಸರ್ಕಾರದಿಂದ ಅನ್ನಭಾಗ್ಯ ಯೋಜನೆಯಡಿ ಪ್ರತಿ ಅರ್ಹ ಫಲಾನುಭವಿಗೆ 05 ಕೆ.ಜಿ ಹೆಚ್ಚುವರಿ ಅಕ್ಕಿಯಂತೆ, ಅಂದಾಜು 2.10 ಲಕ್ಷ ಮೆ.ಟನ್ ಅಕ್ಕಿಯನ್ನು ಪ್ರತಿ ಮಾಹೆ ವಿತರಿಸಲಾಗುತ್ತಿದೆ. ಸದರಿ ಅಕ್ಕಿಯ ಖರೀದಿಗಾಗಿ |

| | | |
|---|---|---|
| | | ರೂ.47707.110 ಲಕ್ಷಗಳನ್ನು ಹಾಗೂ ಇತರೆ ಪ್ರಾಸಂಗಿಂಕ ವೆಚ್ಚಕ್ಕಾಗಿ ಅಂದಾಜು ರೂ.6482.990ಲಕ್ಷಗಳನ್ನು ಖರ್ಚು ಮಾಡಲಾಗುತ್ತಿದೆ. |
| ಆ | ಕಳೆದ ಆರ್ಥಿಕ ವರ್ಷದಲ್ಲಿ ಸದರಿ ಯೋಜನೆಗಾಗಿ ಸರ್ಕಾರ ಎಷ್ಟು ಅನುದಾನ ಮೀಸಲಿಡಲಾಗಿದೆ; | 2024-25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸದರಿ ಯೋಜನೆಗಾಗಿ ಸರ್ಕಾರ ರೂ.605925.000ಲಕ್ಷಗಳ ಅನುದಾನವನ್ನು ಮೀಸಲಿಡಲಾಗಿತ್ತು. |
| ಇ | ಕೇಂದ್ರ ಸರ್ಕಾರದಿಂದ ದೊರೆಯುವ ಧಾನ್ಯ ಮತ್ತು ರಾಜ್ಯ ಸರ್ಕಾರ ಖರೀದಿಸುವ ಧಾನ್ಯಗಳ ಪ್ರಮಾಣವೆಷ್ಟು; | NFSA ಯೋಜನೆಯಡಿ ರಾಜ್ಯಕ್ಕೆ ಪ್ರತಿ ಮಾಹೆ ಕೇಂದ್ರ ಸರ್ಕಾರದಿಂದ 2,17,403ಮೆ.ಟನ್. ಆಹಾರಧಾನ್ಯ ಉಚಿತವಾಗಿ ಬಿಡುಗಡೆಯಾಗುತ್ತದೆ. ರಾಜ್ಯ NFSA ಫಲಾನುಭವಿಗಳಿಗೆ ಪ್ರತಿ ಮಾಹೆ ಅಗತ್ಯವಿರುವ ಅಂದಾಜು 20,000ಮೆ.ಟನ್ ಆಹಾರಧಾನ್ಯ ಪ್ರಮಾಣ ಮತ್ತು ಅನ್ನಭಾಗ್ಯ ಯೋಜನೆಯಡಿ ಪ್ರಸ್ತುತ ಪ್ರತಿ ಮಾಹೆ ರಾಜ್ಯದ ಅರ್ಹ ಫಲಾನುಭವಿಗಳಿಗೆ ಹೆಚ್ಚುವರಿ 5 ಕೆ.ಜಿ ಅಕ್ಕಿ ಹಂಚಿಕೆ ಮಾಡಲಾಗುತ್ತಿದ್ದು, ಪ್ರತಿ ಮಾಹೆ ಅಂದಾಜು 2.10ಲಕ್ಷ ಮೆ.ಟನ್ ಅಕ್ಕಿಯನ್ನುಸರ್ಕಾರದ ಆದೇಶ ದಿನಾಂಕ:19-02-2025 ರಂತೆ OMSS(D) ಯೋಜನೆಯಡಿ FCI ನಿಂದ ಖರೀದಿಸಲಾಗುತ್ತಿದೆ. |
| ಈ | ಯೋಜನೆ ಜಾರಿಗೆ ಸಂಬಂಧಿಸಿದಂತೆ ಎದುರಾಗಿರುವ ಸವಾಲುಗಳು ಯಾವುವು? | ಪ್ರತಿ ಮಾಹೆ ಕೇಂದ್ರ ಸರ್ಕಾರದ NFSA ಹಾಗೂ ರಾಜ್ಯ ಸರ್ಕಾರದ NFSA ಮತ್ತು ಹೆಚ್ಚುವರಿ 5 ಕೆ.ಜಿ. ಅಕ್ಕಿಯನ್ನು ಯಾವುದೇ ತೊಂದರೆ/ ಸಮಸ್ಯೆಗಳಿಲ್ಲದೇ ನಿಯಮಾನುಸಾರ ಎತ್ತುವಳಿ ಮಾಡಿ ಪಡಿತರ ಚೀಟಿದಾರರಿಗೆ ವಿತರಿಸಲಾಗುತ್ತಿದೆ. |

**ಆನಾಸ 20 ಎಫ್‌ಪಿಪಿ 2026 (ಇ-ಆಫೀಸ್)**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು